## ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀಮತಿ ಸುನಂದ, ಅಧ್ಯಕ್ಷರು ಹಾಗೂ ಇತರೆ 21 ಸದಸ್ಯರು, ಯಮರೆ ಗ್ರಾಮ ಪಂಚಾಯತಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ) ಹಾಗೂ 48 (4) ರನ್ವಯ ಕ್ರಮ ಕೈಗೊಳ್ಳುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂ. ಗ್ರಾಅಪ 1135 ಗ್ರಾಪಂಅ 2018, ದಿನಾಂಕ 02.02.2019.
2. ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ರವರ ಪತ್ರ ಸಂ. ಪ್ರಾಆಕ/ಅಭಿವೃದ್ಧಿ/ಸಿಆರ್/13/2019-20, ದಿನಾಂಕ 07.11.2019.

**ಪ್ರಸ್ತಾವನೆ :**

ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 43(ಎ) ಗ್ರಾಮ ಪಂಚಾಯತಿ ಸದಸ್ಯರುಗಳು, 48(4) ಹಾಗೂ 48(5) ರಡಿ ಗ್ರಾಮ ಪಂಚಾಯತಿ ಅಧ್ಯಕ್ಷರು/ಉಪಾಧ್ಯಕ್ಷರುಗಳ ಮೇಲೆ ದಾಖಲಾಗುವ ದೂರುಗಳಿಗೆ ಸಂಬಂಧಿಸಿದ ಅರೆ ನ್ಯಾಯಿಕ ಮಾದರಿಯಲ್ಲಿ ವಿಚಾರಣೆ ಅಧಿಕಾರವನ್ನು ಸಂಬಂಧಿಸಿದ ಕಂದಾಯ ವಿಭಾಗಗಳ ಪ್ರಾದೇಶಿಕ ಆಯುಕ್ತರುಗಳಿಗೆ ವಹಿಸಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರ.ಸಂ.(2)ರ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ರವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯ ಸಂಗಡ ವಿಚಾರಣಾ ವರದಿಯಲ್ಲಿ ಶ್ರೀಮತಿ ಸುನಂದ, ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಇತರೆ 21 ಸದಸ್ಯರು, ಯಮರೆ ಗ್ರಾಮ ಪಂಚಾಯತಿ ಆನೇಕಲ್ ತಾಲ್ಲೂಕು ರವರು ಯಮರೆ ಗ್ರಾಮ ಪಂಚಾಯತಿ ಸೋಂಪುರ ಗ್ರಾಮದ ಸ.ನಂ. 80/2 ರಲ್ಲಿನ ಓವರ್ ಹೆಡ್ ಟ್ಯಾಂಕ್ ತೆರವುಗೊಳಿಸಲು ಅನುಮತಿ ನೀಡಿರುವುದು ಕಾನೂನುಬಾಹಿರವೆಂದು ಇರುವ ದೂರಿನ ಬಗ್ಗೆ ದಿನಾಂಕ: 01.07.2019, 11.09.2019 ಹಾಗೂ 23.09.2019 ರಂದು ವಿಚಾರಣೆ ಮಾಡಲಾಗಿರುತ್ತದೆ. ದಿನಾಂಕ: 01.07.2019ರ ವಿಚಾರಣೆ ದಿನಾಂಕದಂದು ಲಿಖಿತ ಹೇಳಿಕೆ ನೀಡಿರುತ್ತಾರೆ. ಗ್ರಾಮ ಪಂಚಾಯತಿ ವತಿಯಿಂದ ನಿರ್ಮಿಸಲಾದ ಹಳೆ ಓವರ್ ಹೆಡ್ ಟ್ಯಾಂಕ್‌ನ್ನು ತೆರವುಗೊಳಿಸುವ ಮುನ್ನ ಜಿಲ್ಲಾ ಪಂಚಾಯತಿ ಇಂಜಿನಿಯರ್‌ರವರಿಂದ ಟ್ಯಾಂಕ್‌ನ ಸ್ಥಿರತೆಯ ಬಗ್ಗೆ ವರದಿ (Stability Report) ಪಡೆದು ನಂತರ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಪೂರ್ವಾನುಮತಿ ಪಡೆಯಬೇಕಾಗಿರುತ್ತದೆ. ಆದರೆ, ಪೂರ್ವಾನುಮತಿ ಪಡೆದಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಗ್ರಾಮ ಪಂಚಾಯತಿ ಚುನಾಯಿತ ಸದಸ್ಯರು ಟ್ಯಾಂಕ್‌ನ್ನು ತೆರವುಗೊಳಿಸುವ ಸಂಬಂಧ ನಿಯಮಾನುಸಾರ ಕಾನೂನನ್ನು ಪಾಲಿಸಬೇಕಾಗಿರುತ್ತದೆ. ಹೊಸ ಟ್ಯಾಂಕ್ ನಿರ್ಮಾಣದಿಂದ ಸರ್ಕಾರಕ್ಕೆ ನಷ್ಟವಿಲ್ಲವೆಂದು ಹೇಳಿದರೂ ಸಹ ಇದನ್ನು ಸರ್ಕಾರಕ್ಕೆ ನಷ್ಟವೆಂದೇ ಪರಿಗಣಿಸಬೇಕಾಗಿರುತ್ತದೆ. ಗ್ರಾಮ ಪಂಚಾಯತಿ ವತಿಯಿಂದ ನಿರ್ಮಾಣ ಮಾಡಿರುವ ಹಳೆಯ ಓವರ್ ಹೆಡ್ ಟ್ಯಾಂಕ್‌ನ್ನು ತೆರವುಗೊಳಿಸುವ ಮುನ್ನ ಸರ್ಕಾರದ ಪೂರ್ವಾನುಮತಿ ಪಡೆಯದಿರುವುದು ಕಾನೂನುಬಾಹಿರವಾಗಿರುತ್ತದೆ. ಹಳೆಯ ಓವರ್ ಹೆಡ್ ಟ್ಯಾಂಕ್‌ನ್ನು ತೆರವುಗೊಳಿಸಲು ಯಮರೆ ಗ್ರಾಮ ಪಂಚಾಯತಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ 21 ಸದಸ್ಯರುಗಳು ಕಾರಣರಾಗಿರುವುದು ಕಂಡುಬಂದಿರುತ್ತದೆ. ಆದುದರಿಂದ, ಆನೇಕಲ್ ತಾಲ್ಲೂಕು ಯಮರೆ ಗ್ರಾಮ ಪಂಚಾಯತಿಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ 21 ಸದಸ್ಯರುಗಳ ಮೇಲೆ ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 43(ಎ) ಮತ್ತು 48(4) ರನ್ವಯ ಕ್ರಮ ಜರುಗಿಸಬಹುದಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಪ್ರಸ್ತುತ ಪ್ರಕರಣದಲ್ಲಿ ಗ್ರಾಮ ಪಂಚಾಯತಿ ವತಿಯಿಂದ ನಿರ್ಮಾಣ ಮಾಡಿರುವ ಹಳೆಯ ಓವರ್ ಹೆಡ್ ಟ್ಯಾಂಕ್‌ನ್ನು ತೆರವುಗೊಳಿಸುವ ಮುನ್ನ ಸರ್ಕಾರದ ಪೂರ್ವಾನುಮತಿ ಪಡೆಯದಿರುವುದು ಕಾನೂನುಬಾಹಿರವಾಗಿರುತ್ತದೆ. ಹಳೆಯ ಓವರ್ ಹೆಡ್ ಟ್ಯಾಂಕ್‌ನ್ನು ತೆರವುಗೊಳಿಸಲು ಯಮರೆ ಗ್ರಾಮ ಪಂಚಾಯತಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ 21 ಸದಸ್ಯರುಗಳು ಕಾರಣರಾಗಿರುವುದು ಕಂಡುಬಂದಿರುತ್ತದೆ. ಆದುದರಿಂದ, ಆನೇಕಲ್ ತಾಲ್ಲೂಕು ಯಮರೆ ಗ್ರಾಮ ಪಂಚಾಯತಿಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ 21 ಸದಸ್ಯರುಗಳ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 43(ಎ), 48(4) ಮತ್ತು 48(5) ರನ್ವಯ ಯಮರೆ ಗ್ರಾಮ ಪಂಚಾಯತಿಯ ಈ ಕೆಳಕಂಡ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರನ್ನು ಕರ್ನಾಟಕ ಗ್ರಾ.ಸ್ವ&ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 43(ಎ) ಮತ್ತು 48(4) ಹಾಗೂ 48(5) ರನ್ವಯ ಅಧ್ಯಕ್ಷ ಸ್ಥಾನ, ಉಪಾಧ್ಯಕ್ಷ ಸ್ಥಾನ ಮತ್ತು ಸದಸ್ಯತ್ವದಿಂದ ತೆಗೆದುಹಾಕಲು ಸರ್ಕಾರವು ನಿರ್ಣಯಿಸಿದೆ. ಅದರಂತೆ ಈ ಕೆಳಕಂಡ ಆದೇಶ.

| | | | |
|---|---|---|---|
| 1 | ಶ್ರೀಮತಿ ಸುನಂದ, ಅಧ್ಯಕ್ಷರು | 11 | ಶ್ರೀ ಶ್ರೀನಿವಾಸ್.ಹೆಚ್.ಜಿ., ಸದಸ್ಯರು |
| 2 | ಶ್ರೀ ತಿಮ್ಮಯ್ಯ (ಚಿನ್ನಯ್ಯ), ಉಪಾಧ್ಯಕ್ಷರು | 12 | ಶ್ರೀ ಸಂಪಂಗಿ, ಸದಸ್ಯರು |
| 3 | ಶ್ರೀಮತಿ ವೀಣಾ, ಸದಸ್ಯರು | 13 | ಶ್ರೀ ಸುಬ್ರಮಣಿ, ಸದಸ್ಯರು |
| 4 | ಶ್ರೀ ಶಂಕರ್.ಕೆ. ಸದಸ್ಯರು | 14 | ಶ್ರೀಮತಿ ಮಂಜಮ್ಮ, ಸದಸ್ಯರು |
| 5 | ಶ್ರೀ ವಿ.ಜಯಶಂಕರ್, ಸದಸ್ಯರು | 15 | ಶ್ರೀ ನರೇಂದ್ರ ಬಾಬು.ಕೆ.ವಿ. , ಸದಸ್ಯರು |
| 6 | ಶ್ರೀಮತಿ ಜಲಜಾಕ್ಷಿ, ಸದಸ್ಯರು | 16 | ಶ್ರೀ ಶ್ರೀನಿವಾಸ ರೆಡ್ಡಿ, ಸದಸ್ಯರು |
| 7 | ಶ್ರೀ ಎಸ್.ಎಸ್.ನಾಗರಾಜು, ಸದಸ್ಯರು | 17 | ಶ್ರೀಮತಿ ಸುಧಾ, ಸದಸ್ಯರು |
| 8 | ಶ್ರೀ ಎಸ್.ನರೇಂದ್ರ, ಸದಸ್ಯರು | 18 | ಶ್ರೀ ಭಾಸ್ಕರ್, ಸದಸ್ಯರು |
| 9 | ಶ್ರೀಮತಿ ಸುಧಾ, ಸದಸ್ಯರು | 19 | ಶ್ರೀಮತಿ ಶಾಂತಮ್ಮ, ಸದಸ್ಯರು |
| 10 | ಶ್ರೀಮತಿ ಅರುಣ, ಸದಸ್ಯರು | 20 | ಶ್ರೀಮತಿ ಕವಿತಾ, ಸದಸ್ಯರು |
| | | 21 | ಶ್ರೀಮತಿ ಶಾಂತ, ಸದಸ್ಯರು |
| | | 22 | ಶ್ರೀಮತಿ ಲಕ್ಷ್ಮಮ್ಮ, ಸದಸ್ಯರು |

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/1064/ಗ್ರಾಪಂಅ/2019, ಬೆಂಗಳೂರು, ದಿನಾಂಕ:31.01.2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 43(ಎ), 48(4) ಮತ್ತು 48(5) ರನ್ವಯ ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಯಮರೆ ಗ್ರಾಮ ಪಂಚಾಯತಿಯ ಈ ಕೆಳಕಂಡ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರನ್ನು ಕರ್ನಾಟಕ ಗ್ರಾ.ಸ್ವ&ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 43(ಎ) ಮತ್ತು 48(4) ಹಾಗೂ 48(5) ರನ್ವಯ ಕ್ರಮವಾಗಿ ಅಧ್ಯಕ್ಷ ಸ್ಥಾನ, ಉಪಾಧ್ಯಕ್ಷ ಸ್ಥಾನ ಮತ್ತು ಸದಸ್ಯತ್ವದಿಂದ ತೆಗೆದುಹಾಕಿ ಆದೇಶಿಸಿದೆ.

| | | | |
|---|---|---|---|
| 1 | ಶ್ರೀಮತಿ ಸುನಂದ, ಅಧ್ಯಕ್ಷರು | 11 | ಶ್ರೀ ಶ್ರೀನಿವಾಸ್.ಹೆಚ್.ಜಿ., ಸದಸ್ಯರು |
| 2 | ಶ್ರೀ ತಿಮ್ಮಯ್ಯ (ಚಿನ್ನಯ್ಯ), ಉಪಾಧ್ಯಕ್ಷರು | 12 | ಶ್ರೀ ಸಂಪಂಗಿ, ಸದಸ್ಯರು |

| | | | |
|---|---|---|---|
| 3 | ಶ್ರೀಮತಿ ವೀಣಾ, ಸದಸ್ಯರು | 13 | ಶ್ರೀ ಸುಬ್ರಮಣಿ, ಸದಸ್ಯರು |
| 4 | ಶ್ರೀ ಶಂಕರ್.ಕೆ. ಸದಸ್ಯರು | 14 | ಶ್ರೀಮತಿ ಮಂಜಮ್ಮ, ಸದಸ್ಯರು |
| 5 | ಶ್ರೀ ವಿ.ಜಯಶಂಕರ್, ಸದಸ್ಯರು | 15 | ಶ್ರೀ ನರೇಂದ್ರ ಬಾಬು.ಕೆ.ವಿ. , ಸದಸ್ಯರು |
| 6 | ಶ್ರೀಮತಿ ಜಲಜಾಕ್ಷಿ, ಸದಸ್ಯರು | 16 | ಶ್ರೀ ಶ್ರೀನಿವಾಸ ರೆಡ್ಡಿ, ಸದಸ್ಯರು |
| 7 | ಶ್ರೀ ಎಸ್.ಎಸ್.ನಾಗರಾಜು, ಸದಸ್ಯರು | 17 | ಶ್ರೀಮತಿ ಸುಧಾ, ಸದಸ್ಯರು |
| 8 | ಶ್ರೀ ಎಸ್.ನರೇಂದ್ರ, ಸದಸ್ಯರು | 18 | ಶ್ರೀ ಭಾಸ್ಕರ್, ಸದಸ್ಯರು |
| 9 | ಶ್ರೀಮತಿ ಸುಧಾ, ಸದಸ್ಯರು | 19 | ಶ್ರೀಮತಿ ಶಾಂತಮ್ಮ, ಸದಸ್ಯರು |
| 10 | ಶ್ರೀಮತಿ ಅರುಣ, ಸದಸ್ಯರು | 20 | ಶ್ರೀಮತಿ ಕವಿತಾ, ಸದಸ್ಯರು |
| | | 21 | ಶ್ರೀಮತಿ ಶಾಂತ, ಸದಸ್ಯರು |
| | | 22 | ಶ್ರೀಮತಿ ಲಕ್ಷ್ಮಮ್ಮ, ಸದಸ್ಯರು |

ಹಳೆಯ ಓವರ್ ಹೆಡ್ ಟ್ಯಾಂಕ್‌ನ್ನು ತೆರವುಗೊಳಿಸಿ ನಷ್ಟವಾಗಿರುವುದರಿಂದ, ನಷ್ಟವಾಗಿರುವ ಮೊತ್ತವನ್ನು ಸದರಿ ಅಧಿನಿಯಮದ ಪ್ರಕರಣ 157(2) ಮತ್ತು 246(8) ರಡಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಸಂಬಂಧಿಸಿದವರಿಂದ ವಸೂಲಿ ಮಾಡಲು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಆನೇಕಲ್ ಇವರಿಗೆ ಆದೇಶಿಸಿದೆ.

ವಿಚಾರಣಾ ವರದಿಯಲ್ಲಿ ಪ್ರಸ್ತಾಪಿಸಿರುವ ಈ ಅಕ್ರಮದಲ್ಲಿ ಭಾಗಿಯಾಗಿರುವ ಈ ಕೆಳಕಂಡ ಈ ನೌಕರರ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬೆಂಗಳೂರು ನಗರ ಜಿಲ್ಲಾ ಪಂಚಾಯತಿ ಇವರಿಗೆ ಆದೇಶಿಸಿದೆ.

1. ಶ್ರೀ ಎಸ್.ಲಕ್ಷ್ಮೀನಾರಾಯಣ್, ಪಂ.ಅ.ಅಧಿಕಾರಿ
2. ಶ್ರೀ ಆರ್. ನರಸಿಂಹಮೂರ್ತಿ, ಕಾರ್ಯದರ್ಶಿ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

B. Naveenkumar 03/02/2020.
(ಬಿ.ನವೀನ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ (ಗ್ರಾ.ಪಂ.),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಗೆ:**

1) ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೆಂಗಳೂರು ನಗರ ಜಿಲ್ಲೆ.
3) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ.
4) ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಯಮರೆ ಗ್ರಾಮ ಪಂಚಾಯತಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ.

5) ಸಂಬಂಧಿಸಿದವರಿಗೆ–ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಆನೇಕಲ್ ತಾಲ್ಲೂಕು ಇವರ ಮುಖಾಂತರ.

6) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

7) ವೆಬ್‌ಸೈಟ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.